

ಅರುಣ ಪಿ. ಭಟ್ಟ

## ವಾರಭವಿಷ್ಯ 5.11.2020ರಿಂದ 11.11.2020ರವರೆಗೆ




ಬಹಳ ಮುಖ್ಯವಾದ ಪಟ್ಟಿಯೊಂದನ್ನು ಸಿದ್ಧ ಮಾಡಿಕೊಳ್ಳುವುದಕ್ಕೆ ಸಿದ್ಧರಾಗುತ್ತೀರಿ. ಕೆಲವು ಕಣ್ತಪ್ಪಿನಿಂದ ಬಿಟ್ಟು ಹೋಗುವ ಸಾಧ್ಯತೆ ಇದೆ. ಇದರಿಂದ ಹಿರಿಯ ಅಧಿಕಾರಿಗಳು ಬೇಸರಿಸಿಕೊಳ್ಳುತ್ತಾರೆ. ಈ ಅವಧಿಯಲ್ಲಿ ತಾಳ್ಮೆ ಮತ್ತು ಧೈರ್ಯ ಬಹಳ ಮುಖ್ಯವಾಗುತ್ತದೆ. ಮುಖ್ಯವಾಗಿ ಸಮಯದ ಕೊರತೆ ವಿಪರೀತವಾಗಿ ಆರೋಗ್ಯ ಉತ್ತಮವಾಗಿರುತ್ತದೆ. ಶುಭದಿನ 11. ಶ್ರೀ ದುರ್ಗಾಪಾರಾಯಣ ಮಾಡಿರಿ.




ವಾರದ ಶುರುವಿನಲ್ಲಿ ವ್ಯಾಪಾರ ಕ್ಷೇತ್ರಕ್ಕೆ ಸಂಬಂಧಿಸಿದ ವಿಷಯಗಳಿಗೆ ಹೆಚ್ಚು ಸಮಯವನ್ನು ಮೀಸಲಿಡಲಿದ್ದೀರಿ. ಆರೋಗ್ಯದಲ್ಲಿ ಏರುಪೇರಾಗುವ ಸಾಧ್ಯತೆಗಳಿವೆ. ಆಹಾರ ನೀರಿನ ಸೇವನೆಯಲ್ಲಿ ಬಹಳ ಎಚ್ಚರಿಕೆಯಿಂದ ಇರಬೇಕು. ಉದ್ಯೋಗ ಸ್ಥಳದಲ್ಲಿ ಒತ್ತಡ ಎದುರಾಗಬಹುದು. ಅದರ ಪ್ರಭಾವ ಆರೋಗ್ಯದ ಮೇಲೂ ಆಗಲಿದೆ. ವಾರದ ಅಂತ್ಯಕ್ಕೆ ದೈಹಿಕ ಕ್ಷಮತೆ ಉತ್ತಮವಾಗಿರುತ್ತದೆ. ಶುಭದಿನ 8. ವಿಷ್ಣು ಸಹಸ್ರನಾಮ ಪಠಿಸಿರಿ.




ವಾರದ ಶುರುವಿನಲ್ಲಿ ಕೌಟುಂಬಿಕ ವಿಚಾರದಲ್ಲಿ ಉತ್ತಮ ಹಾಗೂ ಸೂಕ್ತವಾದ ಹಲವು ಅವಕಾಶಗಳು ದೊರೆಯಲಿವೆ. ಗ್ರಹಗತಿಗಳು ಉತ್ತಮವಾಗಿ ಇರುವುದರಿಂದ ನಿಮಗೆ ದೊರೆಯುವ ಅವಕಾಶಗಳನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳಲಿದ್ದೀರಿ. ಈ ಅವಧಿಯಲ್ಲಿ ನೀವು ಹಾಕುವ ಶ್ರಮಕ್ಕೆ ಅದ್ಭುತವಾದ ಯಶಸ್ಸು ದೊರೆಯಲಿದೆ. ಶುಭದಿನ 9. ಹನುಮಾನ್ ಚಾಲೀಸ್ ಪಠಿಸಿರಿ.




ವಾರದ ಶುರುವಿನಲ್ಲಿ ವೃತ್ತಿಪರ ಜೀವನದಲ್ಲಿ ಕೆಲವು ಬಿಕ್ಕಟ್ಟು ಹಾಗೂ ಸಮಸ್ಯೆಗಳು ಎದುರಾಗುತ್ತವೆ. ವಾರದ ಮಧ್ಯ ಭಾಗದ ಹೊತ್ತಿಗೆ ಆರೋಗ್ಯ ಚೇತರಿಸಿಕೊಳ್ಳುತ್ತದೆ. ಕೌಟುಂಬಿಕವಾಗಿ ಸಂತೋಷ ಇರುತ್ತದೆ. ವಾರದ ಅಂತ್ಯಕ್ಕೆ ಸರಿಯುತ್ತಾ ವೈಯಕ್ತಿಕ ಸಂಬಂಧ ಮತ್ತು ಆರೋಗ್ಯ ಅತ್ಯುತ್ತಮವಾಗುತ್ತದೆ. ಪೋಷಕರ ಬಗ್ಗೆ ಹೆಚ್ಚು ಕಾಳಜಿ ವಹಿಸಬೇಕಾಗುತ್ತದೆ. ಶುಭದಿನ 11. ಈಶ್ವರನಿಗೆ ರುದ್ರಾಭಿಷೇಕ ಮಾಡಿರಿ.




ವಾರದ ಆರಂಭವು ಬಹಳ ಸಂತೋಷವಾಗಿರುತ್ತದೆ. ಒಂದು ಕಡೆ ಆದಾಯ ಹೆಚ್ಚಿಸಿಕೊಳ್ಳುವುದಕ್ಕೆ ಉತ್ತಮ ಅವಕಾಶಗಳು ದೊರೆಯಲಿವೆ. ಇನ್ನೊಂದು ಕಡೆ ಮನೆಯನ್ನು ಸಲೀಸಾಗಿ ನಡೆಸಲು ಬೇಕಾದ ತೀರ್ಮಾನಗಳನ್ನು ಸರಿಯಾದ ಸಮಯದಲ್ಲಿ ಕೈಗೊಳ್ಳುತ್ತೀರಿ. ಇದರಿಂದ ನಿಮ್ಮ ಆತ್ಮವಿಶ್ವಾಸ ಮತ್ತಷ್ಟು ಹೆಚ್ಚಾಗಲಿದೆ. ಇದರಿಂದ ವಿಪರೀತ ಬೇಸರ ಆಗುತ್ತದೆ. ಶುಭದಿನ 10. ಸೌಂದರ್ಯಲಹರಿ ಪಠಿಸಿರಿ.




ವ್ಯಾಪಾರದ ಉನ್ನತಿಗೆ ಹೆಚ್ಚು ಶ್ರಮ ಹಾಕಲಿದ್ದೀರಿ. ಈ ಪ್ರಯತ್ನದಲ್ಲಿ ನಿಮಗೆ ಯಶಸ್ಸು ದೊರೆಯಲಿದೆ. ಗ್ರಹಗತಿಗಳು ಶುಭ ದೃಷ್ಟಿ ಬೀರುವ ಸಮಯ ಇದು. ವಾರದ ಮಧ್ಯ ಭಾಗದಲ್ಲಿ ಆರೋಗ್ಯ ಅತ್ಯುತ್ತಮವಾಗಿರುತ್ತದೆ. ಜತೆಗೆ ಈಗಾಗಲೇ ಸಾಲ ನೀಡಿದ್ದರೆ ಅದರ ವಸೂಲಿ ಆಗುತ್ತದೆ. ಉದ್ಯೋಗದ ಸನ್ನಿವೇಶವು ಈ ಹಿಂದಿನಂತೆಯೇ ಮುಂದುವರಿಯಲಿದೆ. ಶುಭದಿನ 8. ಗಣಪತಿಗೆ ದೂರ್ವಾರ್ಚನೆ ಮಾಡಿಸಿರಿ.




ಮಾಧ್ಯಮದಲ್ಲಿ ಕಾರ್ಯ ನಿರ್ವಹಿಸುವವರಿಗೆ ಯಶಸ್ಸು ದೊರೆಯುತ್ತದೆ. ಲೇಖಕರಾದವರಿಗೆ ಓದುಗರಿಂದ ಪುಸ್ತಕಗಳ ಬೇಡಿಕೆ ಹೆಚ್ಚಾಗಲಿದೆ. ಉಸಿರಾಟದ ಸಮಸ್ಯೆ ಹಾಗೂ ಮಲಬದ್ಧತೆ ನಿಮ್ಮನ್ನು ಕಾಡಬಹುದು. ವೈಯಕ್ತಿಕ ಸಂಬಂಧದಲ್ಲಿ ಪರಸ್ಪರ ವಿಶ್ವಾಸ ಹೆಚ್ಚಾಗುತ್ತದೆ. ಇದರಿಂದ ಸಂತೋಷ ಹೆಚ್ಚಾಗುತ್ತದೆ. ಉನ್ನತ ಸ್ಥಾನ ಅಲಂಕರಿಸುವ ಅವಕಾಶ ಇದೆ. ಶುಭದಿನ 10. ನವಗ್ರಹ ಸ್ತೋತ್ರ ಪಠಿಸಿರಿ.




ಜೀವನದಲ್ಲಿ ನಿಮ್ಮ ಪ್ರಭಾವ ಅಷ್ಟಾಗಿ ಕೆಲಸಕ್ಕೆ ಬರುತ್ತಿಲ್ಲ ಎಂಬ ಆತಂಕ ಎದುರಾಗುತ್ತದೆ. ಇದರಿಂದ ಬಹಳ ಚಿಂತೆಗೆ ಒಳಗಾಗುತ್ತೀರಿ. ಹೀಗೆ ದುರ್ಬಲ ಆಗುತ್ತಿರುವ ವರ್ಚಸ್ಸನ್ನು ಬಲಿಷ್ಠಗೊಳಿಸುವ ನಿಟ್ಟಿನಲ್ಲಿ ಹೆಚ್ಚಿನ ಕೆಲಸ ಮಾಡುತ್ತೀರಿ. ಸಂಬಂಧದಲ್ಲಿ ಪರಸ್ಪರ ಆರೋಪ ಮಾಡುವ ಸಾಧ್ಯತೆ ಇದೆ. ನಿಮ್ಮ ವಿಶ್ವಾಸಾರ್ಹತೆ ಕಾಯ್ದುಕೊಳ್ಳುವಲ್ಲಿ ಸಫಲರಾಗುತ್ತೀರಿ. ಶುಭದಿನ 10. ಶನಿ ಸ್ತೋತ್ರ ಪಠಣ ಮಾಡಿರಿ.




ಸಾರ್ವಜನಿಕ ಸಂಪರ್ಕ ಹೆಚ್ಚು ಮಾಡಿಕೊಳ್ಳಲು ವಾರದ ಶುರುವಿನಿಂದಲೇ ಹೆಚ್ಚು ಶ್ರಮ ಹಾಕುತ್ತೀರಿ. ಉದ್ಯಮಿಗಳು ಈಗ ನೀಡುತ್ತಿರುವ ಸೇವೆಗಳ ಜತೆಗೆ ಇನ್ನಷ್ಟು ಸೇರ್ಪಡೆ ಮಾಡಲಿದ್ದೀರಿ. ಆ ಮೂಲಕ ಇನ್ನೂ ಹೆಚ್ಚು ದುಡಿಯಬೇಕು ಎಂಬ ನಿಮ್ಮ ಉದ್ದೇಶ ಈಡೇರಿದಂತಾಗುತ್ತದೆ. ಈ ಸಮಯದಲ್ಲಿ ಆರೋಗ್ಯ ಚೆನ್ನಾಗಿದೆ ಎಂದು ನಿಮಗೇ ಅನಿಸುತ್ತದೆ. ಶುಭದಿನ 9. ಶ್ರೀವೆಂಕಟೇಶ್ವರ ಸ್ತೋತ್ರ ಪಠಿಸಿರಿ




ವಾರದ ಆರಂಭದಲ್ಲಿ ವ್ಯವಹಾರದ ಬಗ್ಗೆ ಗಮನ ಹೆಚ್ಚು ನೀಡಬೇಕಾಗುತ್ತದೆ. ನಿಮ್ಮ ಜೊತೆ ಕೆಲಸ ಮಾಡುವವರಿಗೆ ಪ್ರೋತ್ಸಾಹ ನೀಡುತ್ತೀರಿ. ಇನ್ನು ಉತ್ಪಾದನೆ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸುವವರಿಗೆ ಹಣಕಾಸಿನ ಕೊರತೆ ಕಾಡಲಿದೆ. ವಾರದ ಮಧ್ಯ ಭಾಗದಲ್ಲಿ ಸಂಗಾತಿಯನ್ನು ಒಲೈಸುವ ಸಲುವಾಗಿ ಇಷ್ಟವಾಗುವ ಉಡುಗೊರೆಗಳನ್ನು ನೀಡುವ ಸಾಧ್ಯತೆ ಇದೆ. ಶುಭದಿನ 8. ಶಿವಕವಚ ಪಠಣ ಮಾಡಿರಿ.




ವಾರದ ಶುರುವಿನಲ್ಲಿ ನಿಮ್ಮ ಬಳಿ ಇರುವ ಹಣದ ಸದುಪಯೋಗ ಮಾಡಿಕೊಳ್ಳುವ ಬಗ್ಗೆ ಯೋಜನೆ ರೂಪಿಸಲಿದ್ದೀರಿ. ಮಾರಾಟ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸುವವರಿಗೆ ಲಾಭ ಪಡೆಯಲು ಅತ್ಯುತ್ತಮ ಅವಕಾಶಗಳಿವೆ. ಪ್ರೀತಿ ಪ್ರೇಮದಲ್ಲಿ ಇರುವವರು ಸಂಗಾತಿಯ ಭಾವನೆಗಳಿಗೆ ಗೌರವ ನೀಡುತ್ತೀರಿ. ಸಂಗಾತಿ ಜತೆಗೆ ಮಾತುಕತೆ ಸಾಧ್ಯವಿಲ್ಲದ ಸನ್ನಿವೇಶ ಎದುರಾಗುತ್ತದೆ. ಶುಭದಿನ 6. ದಕ್ಷಿಣಾಮೂರ್ತಿ ಸ್ತೋತ್ರ ಪಠಿಸಿರಿ.




ನೀವು ಖರ್ಚು ಮಾಡಿದ ಹಣಕ್ಕೆ ತಕ್ಕ ಪ್ರತಿಫಲ ಇಲ್ಲ. ಆರೋಗ್ಯ ಉತ್ತಮವಾಗಿರುತ್ತದೆ. ಕೌಟುಂಬಿಕ ಜೀವನ ಸುಖವಾಗಿ ಇರುತ್ತದೆ. ವಾರದ ಮಧ್ಯ ಭಾಗದಲ್ಲಿ ಪ್ರೇಮಿಗಳಿಗೆ ಪ್ರೇಮ ನಿವೇದನೆ ಮಾಡಿಕೊಳ್ಳುವ ಸಾಧ್ಯತೆ ಹೆಚ್ಚಾಗಿದೆ. ನಿಮ್ಮ ಮನಸಿಗೆ ನೆಚ್ಚಿದವರ ಎದುರು ಪ್ರೀತಿಯನ್ನು ಹೇಳಿಕೊಳ್ಳಲಿದ್ದೀರಿ. ಈ ಅವಧಿಯಲ್ಲಿ ಹಣಕಾಸಿನ ಹರಿವು ಉತ್ತಮವಾಗಿ ಇರಲಿದೆ. ಶುಭದಿನ 8. ಚಂಡಿ ಪಾರಾಯಣ ಮಾಡಿರಿ.